ದಿನಾಂಕಃ 28.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ 7(ಎ) ರಿಂದ (ಡಿ), 8 ರಿಂದ 12 ಮತ್ತು 14 ನೇ ಪ್ರತಿವಾದಿಗಳ ಪರ ವಕೀಲರಿಂದಃ

6. ನನ್ನ ಮನೆಯ ಖರ್ಚನ್ನೆಲ್ಲಾ ತೆಗೆದು ನನಗೆ ವರ್ಷಕ್ಕೆ 24 ಸಾವಿರ ಉಳಿತಾಯ ಆಗುತ್ತದೆ. ಅದನ್ನು ತೋರಿಸಲು ದಾಖಲಾತಿಗಳು ಇಲ್ಲ. 1988 ರಿಂದ ನನ್ನ ಹೆಂಡತಿ ಹಣವನ್ನು ಮನೆಯಲ್ಲಿ ಕೂಡಿ ಇಡುತ್ತಾ ಬಂದಿರುತ್ತಾರೆ. 1988 ರಿಂದ 1999 ರ ವರೆಗೂ ನನ್ನ ಹೆಂಡತಿ 1 ಲಕ್ಷ ಹಣ ಕೂಡಿ ಇಟ್ಟಿರುತ್ತಾರೆ. ಇದನ್ನು ತೋರಿಸಲು ದಾಖಲೆ ಇಲ್ಲ. 1988 ರಿಂದ 1999 ರವರೆಗೆ ನನ್ನ ಕುಟುಂಬಕ್ಕೆ 40 ಸಾವಿರ ಖರ್ಚು ಆಗಿರುತ್ತದೆ. ಈ ವಿಚಾರವನ್ನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ. ನಾನು ಈಗ 2 ವರ್ಷದ ಹಿಂದೆ ನಿವೃತ್ತಿ ಹೊಂದಿದ್ದೇನೆ. ನಾನು ನಿವೃತ್ತಿಯಾಗಿ ಮುಂದೆ ಬರುವ ಸಪ್ಟೆಂಬರ್‌ಗೆ 2 ವರ್ಷವಾಗುತ್ತದೆ. ನಾನು ಈಗ 2 ತಿಂಗಳ ಹಿಂದೆ ನಿವೃತ್ತಿ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಭರಮಪ್ಪ ಹರಿಜನ್‌ರವರ ಎಂಬ ಹೆಸರಿನವರು ಎಷ್ಟು ಜನ ನಿಮ್ಮ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪ್ರಶ್ನೆ ಕೇಳುತ್ತಿರುವಾಗ ಸಾಕ್ಷಿ ಭರಮಪ್ಪ ಹರಿಜನ್ ಬದುಕಿರುತ್ತಾರೆಂದು ನುಡಿಯುತ್ತಾರೆ. ಆ ಹೆಸರಿನವರು ಅವರು ಒಬ್ಬರೇ ಇದ್ದಾರೆ. ನಾನು ಭರಮಪ್ಪ ಹರಿಜನ್ ಜೀವಂತವಿದ್ದಾರೆಂದು ಹೇಳಿರುವುದು ಸತ್ಯವಾಗಿರುತ್ತದೆ.

7. ಸಾಕ್ಷಿಗೆ ನಿಡಿ40 ರ 5 ನೇ ಪುಟದಲ್ಲಿ ತಮ್ಮ ಸಹಿ ಇದೆ ಎಂದು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದಾರೆ, ಸದರಿ ಸಹಿಯನ್ನು ನಿಪಿ21 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ19 ನ್ನು ತೋರಿಸಲಾಗಿ ಅದರಲ್ಲಿ ತಮ್ಮ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದೇರೀತಿ 6 ಪುಟಗಳಲ್ಲಿ ತಮ್ಮ ಸಹಿಗಳನ್ನು ಮಾಡಿದ್ದೇನೆಂದು ನೋಡಿ ಗುರುತಿಸಿದ್ದು, ಅವುಗಳನ್ನು ಒತ್ತಾಯ ಪೂರ್ವಕವಾಗಿ ಮಾಡಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ಸದರಿ ಭಾವಚಿತ್ರ ಹಾಗೂ ಸಹಿಗಳನ್ನು ನಿಪಿ19(ಎ) ರಿಂದ (ಜಿ) ಎಂದು ಗುರುತಿಸಲಾಯಿತು. ವಾದಿಗಳು ಈ ದಾವೆ

ಸಲ್ಲಿಸುವಾಗ ಓ ಎಸ್ ನಂ.177/2011ರ ದಾಖಲಾತಿಗಳನ್ನು ಅವರೇ ತೆಗೆದುಕೊಂಡಿರುತ್ತಾರೆ. ಸದರಿ ದಾವೆಯ ಬಗ್ಗೆ ವಾದಿಗಳು ನನ್ನ ಬಳಿ ಏನನ್ನೂ ಕೇಳಿಲ್ಲ. ಈ ದಾವೆಯಲ್ಲಿ ಸಮನ್ಸ್ ಬಂದಾಗ ವಾದಿಗಳು ನನ್ನ ಜೊತೆ ವಾಸವಿರಲಿಲ್ಲ. 17-18 ವರ್ಷಗಳಿಂದ ಅವರು ನನ್ನಿಂದ ಬೇರೆ ಇದ್ದಾರೆಂದು ಸಾಕ್ಷಿ ಅವರ ಪರ ವಕೀಲರು ಎದ್ದು ನಿಂತ ಮೇಲೆ 8 ವರ್ಷದಿಂದ ನನ್ನಿಂದ ಬೇರೆ ಇದ್ದಾರೆ ಎನ್ನುತ್ತಾರೆ. ಈ ವಿಚಾರವನ್ನು ನನ್ನ ತಕರಾರಿನಲ್ಲಿ ಬರೆಸಿರುವ ಬಗ್ಗೆ ನನಗೆ ನೆನಪಿಲ್ಲ.

8. ನಿಪಿ20 ಬಾಂಡ್‌ನ್ನು ನೀವೆ ನಿಮ್ಮ ಹೆಸರಿನಲ್ಲಿ ನಿಮ್ಮ ಹೆಣ್ಣುಮಕ್ಕಳಿಗೆ ತೆಗೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿ ಅವರೇ ನನ್ನ ಹೆಸರನ್ನು ಬರೆಸಿ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ಈ ದಾವೆಯಲ್ಲಿ ನಾನು ನಿಪಿ20ನ್ನು ಇದೇ ಮೊದಲು ಬಾರಿ ನೋಡುತ್ತಿರುವುದು, ಈ ಮೊದಲು ಎಲ್ಲಿಯೂ ನೋಡಿರುವುದಿಲ್ಲ. ನಾನು ಈ ದಾವೆಯಲ್ಲಿ ತಕರಾರು ಸಲ್ಲಿಸುವ ಮೊದಲು ನನ್ನ ಹೆಣ್ಣುಮಕ್ಕಳು ಏನು ದಾಖಲೆಗಳನ್ನು ಹಾಜರು ಪಡಿಸಿದ್ದಾರೆ ಎಂದು ನಾನು ನೋಡಿಲ್ಲ. ನನ್ನ ವಕೀಲರ ಕಡೆಯಿಂದಲೂ ಸಹ ನಾನು ಅದನ್ನು ತಿಳಿದುಕೊಂಡಿಲ್ಲ. 2006ರಿಂದ ನನ್ನ ಹೆಣ್ಣುಮಕ್ಕಳು ನನ್ನಿಂದ ಬೇರೆ ಇರುತ್ತಾರೆ. ಈ ವಿಚಾರವನ್ನು ನನ್ನ ವಕೀಲರಿಗೆ ಹೇಳಿಲ್ಲ. ನನ್ನ ಹೆಂಡತಿ, ಭರಮಪ್ಪ ಹರಿಜನ್ ಮತ್ತು ಕಾರ್ಯದರ್ಶಿ ಪಿ ಎಲ್ ಡಿ ಬ್ಯಾಂಕ್ ಗೋಕಾಕ್‌ರವರ ಸಾಕ್ಷ್ಯವನ್ನು ನಾನು ಮಾಡಿಸುವುದಿಲ್ಲ. ನಿಮ್ಮ ಪ್ರಮಾಣಪತ್ರದಲ್ಲಿ 23 ವರ್ಷಗಳಿಂದ ಬೇರೆ ಇದ್ದೀರಿ ಎಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇವತ್ತಿಗೆ ಬೇರೆಯಾಗಿ 30 ವರ್ಷಗಳಾಗಿವೆ ಎನ್ನುತ್ತಾರೆ. 30 ವರ್ಷಗಳಿಂದ ನನ್ನ ವ್ಯವಹಾರವೇ ಬೇರೆ ನನ್ನ ತಮ್ಮಂದಿರ ವ್ಯವಹಾರಗಳೇ ಬೇರೆ ಇರುತ್ತವೆ. ನಮ್ಮ ಆಧಾರ್ ಕಾರ್ಡ್‌ಗಳು ಬೇರೆ ಬೇರೆ ಇರುತ್ತವೆ. ನನ್ನ ಪಡಿತರ ಚೀಟಿ ಇರುವುದಿಲ್ಲ, ನನ್ನ ಮಗನದ್ದು ಇದೆ. ನೀವೇ ಬೇರೆ ಜಮೀನಿನ ಸ್ವಾಧೀನದಲ್ಲಿದ್ದೀರಿ ನಿಮ್ಮ ತಮ್ಮಂದಿರು ಬೇರೆ ಇದ್ದಾರೆ ಎಂದರೆ ಸಾಕ್ಷಿ ಹಿರಿಯರ ಆಸ್ತಿಯಲ್ಲಿ 7 ಭಾಗವಾಗಬೇಕು ಎನ್ನುತ್ತಾರೆ.

9. 5 ವರ್ಷಗಳಿಂದ ನನ್ನ ತಮ್ಮಂದಿರು ಪಿತ್ರಾರ್ಜಿತ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದಾರೆ. ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇದ್ದೇನೆ ಎಂದು ತೋರಿಸಲು ಬಾಯಿ ಹೇಳಿಕೆ ಬಿಟ್ಟು ಬೇರೆ ದಾಖಲೆಯಿಲ್ಲ ಎಂದರೆ ಸರಿ. ಓ ಎಸ್ 177/2011 ರಲ್ಲಿ ನಾನು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿದ್ದಾರೆ. ಎಫ್ ಆರ್ ಓ ಎಸ್ ನಂ.292/2016 ವಜಾ ಆಗಿದೆ ಹಾಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ ಪಿ ವಜಾ ಆಗಿದೆ ಎಂದರೆ ಸಾಕ್ಷಿ ತಡವಾಗಿ ಅರ್ಜಿ ಸಲ್ಲಿಸಿದ್ದೀರಿ ಎಂದು ವಾಜಾ ಆಗಿವೆ ಎನ್ನುತ್ತಾರೆ. ಓ ಎಸ್ 177/2011 ರಲ್ಲಿ ನನ್ನ ಅರ್ಜಿಯ ಮೇಲೆ ಆದ ಆದೇಶವನ್ನು ನಾನು ಅಪೀಲು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದು, ನ್ಯಾಯಾಲಯದಲ್ಲಿ ರಾಜೀ ಮಾಡಿಕೊಂಡು ಡಿಕ್ರಿ ಪಡೆದುಕೊಂಡಿದ್ದರೂ ಸಹ ಉದ್ದೇಶಪೂರ್ವಕವಾಗಿ ವಾದಿಗಳಿಗೆ ನಾನೇ ದಾಖಲಾತಿಗಳನ್ನು ತೆಗೆದುಕೊಟ್ಟು ಈ ದಾವೆಯನ್ನು ದಾಖಲು ಮಾಡಿಸಿದ್ದೇನೆಂದರೆ ಸರಿಯಲ್ಲ. ನಿಪಿ19 ಮತ್ತು 20 ದಾಖಲೆಗಳನ್ನು ತೆಗೆಸಲು ಸಿ ಆರ್ ನಂ.735 ಅರ್ಜಿಯನ್ನು ಶ್ರೀ. ಪಿ.ಎಮ್.ಹೊನ್ನುರ್ ವಕೀಲರ ಮೂಲಕ ನಾನೇ ಕೊಡಿಸಿದ್ದೇನೆಂದರೆ ಸರಿಯಲ್ಲ. ಈ ಪ್ರಕಾರ ನ್ಯಾಯಾಲಯದ ದಾಖಲೆಗಳಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿ ಹೆಣ್ಣುಮಕ್ಕಳು ಎನು ಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಮ್ಮಂದಿರಿಗೆ ತೊಂದರೆ ಕೊಡಬೇಕೆಂದು ನನ್ನ ಹೆಣ್ಣುಮಕ್ಕಳ ಮೂಲಕ ಈ ದಾವೆ ದಾಖಲು ಮಾಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಕರಾರು ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವುದು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ